ಮಾತಾಡಿದ್ದನಂತೆ. ಅವರು ನಂಗೆ ಹರ್ಟ್ ಆಗಿದೆ ಅಂತ ಕಂಪ್ಲೇಂಟ್ ಮಾಡಿದ್ದಾರಂತೆ. ನನ್ನ ಮಗನ ಪರವಾಗಿ ಅವರ ಹತ್ರ ಸಾರಿ ಕೇಳೋಣ ಅಂತ ಬಂದೆ. ಅವರು ವಾರದ ರಜೆಯಲ್ಲಿದ್ದಾರೆ ಅಂತ ಗೊತ್ತಾಯ್ತು. ತೇಜಸ್ವಿಗೆ ಹೆಲ್ತ್ ಸರಿ ಇಲ್ಲ. ಗುಡ್‌ಹೆಲ್ತ್ ಇಂಡಿಯಾ ಹಾಸ್ಪಿಟಲ್‌ನಲ್ಲಿ ಅಡ್ಮಿಟ್ ಆಗಿದ್ದಾನೆ. ಈಗ ಚೆನ್ನಾಗಿದ್ದಾನೆ. ಆಫೀಸಿಗೆ ಹೋಗಿ ಸೀತಾಲಕ್ಷ್ಮಿ ಅವರ ಹತ್ರ ನನ್ನ ಪರವಾಗಿ ನೀನೇ ಸಾರಿ ಕೇಳು ಅಂತ ಮಗ ಹೇಳಿದ. ಹಾಗೇ ನಿಮ್ಮನ್ನು ಭೇಟಿಯಾಗಿ ಈ ಲೆಟರ್ ಕೊಟ್ಟು ಬಾ ಅಂದ... ಇದು ಅವನ ರೆಸಿಗ್ನೇಷನ್ ಲೆಟರ್. ದಯವಿಟ್ಟು ತಗೊಳ್ಳಿ' ಅಂತ ಹೇಳುತ್ತ ಒಂದು ಕವರನ್ನು ಕೊಟ್ಟರು. 'ಅವನನ್ನು ಊರಿಗೆ ಕರಕೊಂಡು ಹೋಗಬೇಕು ಅಂತ ಡಿಸೈಡ್ ಮಾಡಿದ್ದೀನಿ. ಇಲ್ಲಿದ್ದರೆ ಇಂಥದ್ದೇನಾದರೂ ಮಾಡಿ ಎಲ್ಲರಿಗೂ ನೋವು ಕೊಡ್ತಾನೇ ಇರ್ತಾನೆ. ಅವನದ್ದು ಹುಡುಗಾಟದ ಸ್ವಭಾವ. ಅವನ ಪರವಾಗಿ ನಾನು ಕ್ಷಮೆ ಕೇಳ್ತೀನಿ. ದಯವಿಟ್ಟು ಅವನನ್ನು ಕ್ಷಮಿಸಿ' ಅನ್ನುತ್ತ ಎದ್ದು ನಿಂತರು.

'ತೇಜಸ್ವಿಗೆ ಏನಾಗಿದೆ?' ಅಂತ ಸಂಪಾದಕರು ಆತಂಕದಲ್ಲಿ ಕೇಳಿದರು. 'ಸರ್, ಅವನಿಗೆ ಕೆಲವು ವರ್ಷಗಳಿಂದ ಹಾರ್ಟ್ ಪ್ರಾಬ್ಲಂ ಇತ್ತು. ಈಗ ಎರಡು ವರ್ಷಗಳಿಂದ ಜಾಸ್ತಿ ಆಗಿ, ಟ್ರೀಟ್‌ಮೆಂಟ್ ನಡೀತಾ ಇದೆ. ಎರಡು ತಿಂಗಳ ಹಿಂದೆ ಮೈಲ್ಡಾಗಿ ಅಟ್ಯಾಕ್ ಆಗಿತ್ತು...

ನಿಮ್ಮ ಪತ್ರಿಕೆಯಲ್ಲಿ ಕೆಲಸ ಮಾಡಬೇಕು ಅಂತ ಅವನು ತುಂಬಾ ಆಸೆ ಪಟ್ಟಿದ್ದ. ಒಳ್ಳೆಯ ಪರಿಸರದಲ್ಲಿದ್ದರೆ ಅವನ ಆರೋಗ್ಯ ಸುಧಾರಿಸಬಹುದು ಅಂತ ನಮ್ಮ ಡಾಕ್ಟರೂ ಹೇಳಿದ್ದರು. ನಿಮ್ಮ ಪತ್ರಿಕೆ ಸೇರಿದ ಮೇಲೆ ಅವನ ಆರೋಗ್ಯ ಸುಧಾರಿಸಿತ್ತು. ತೇಜಸ್ವಿಗೆ ಹೆಣ್ಣುಮಕ್ಕಳ ಬಗ್ಗೆ ತುಂಬಾನೆ ಗೌರವ ಇದೆ. ಆದರೆ, ಅವನದು ಹುಡುಗು ಬುದ್ಧಿ. ತಮಾಷೆಗೆ ಅಂತ ಏನೋ ಹೇಳ್ತ ಇರ್ತಾನೆ. ಅವನ ಮಾತಿನಿಂದ ಸೀತಮ್ಮ ಅವರಿಗೆ ಹರ್ಟ್ ಆಯ್ತಂತೆ... ತೇಜಸ್ವಿ ಪರವಾಗಿ ನಾನು ಅವರ ಕ್ಷಮೆ ಕೇಳ್ತೀನಿ. ಆಸ್ಪತ್ರೆಯಲ್ಲಿ ತೇಜಸ್ವಿ ಜತೆ ಅಜಯ್ ಒಬ್ಬನೇ ಇದ್ದಾನೆ ನಾನು ಹೋಗಬೇಕು' ಸರ್ ಎಂದು ಹೇಳುತ್ತ ಎದ್ದು ನಿಂತು ಎರಡೂ ಕೈ ಜೋಡಿಸಿ ಮತ್ತೆ ನಮಸ್ಕಾರ ಹೇಳಿ ಹಾಗೇ ಮೀಟಿಂಗ್ ರೂಮಿನಲ್ಲಿದ್ದವರ ಕಡೆಗೆ ನೋಡುತ್ತ ಹೊರಕ್ಕೆ ಹೋದರು.

ಸಂಪಾದಕರು ಸೇರಿದಂತೆ ಎಲ್ಲರಿಗೂ ಏನು ಹೇಳಬೇಕು ಅನ್ನೋದು ಗೊತ್ತಾಗದೆ ಅವರು ಹೋಗುವುದನ್ನು ನೋಡುತ್ತ ಕೆಲ ನಿಮಿಷ ಸುಮ್ಮನೆ ಕೂತಿದ್ದರು.

ಎರಡು ನಿಮಿಷ ಕಳೆಯುವಷ್ಟರಲ್ಲಿ ಓಂಪ್ರಕಾಶ್ ಫೋನ್ ರಿಂಗ್ ಆಯಿತು. ಅವರು ಹೊರಕ್ಕೆ ಹೋಗಿ, ಮತ್ತೆ ಗಡಿಬಿಡಿಯಿಂದ ಮೀಟಿಂಗ್ ರೂಮಿನೊಳಕ್ಕೆ ಬಂದರು.

'ಸರ್, ಹತ್ತು ನಿಮಿಷಗಳ ಮೊದಲು ತೇಜಸ್ವಿ ಹೋಗಿಬಿಟ್ಟನಂತೆ... ಅಜಯ್ ಫೋನ್ ಮಾಡಿದ್ದ. ಅವನ ತಾಯಿ ಸಂಪಾದಕರನ್ನು ನೋಡಲು ಆಫೀಸಿಗೆ ಬಂದಿದ್ದಾರೆ. ಕೂಡಲೇ ಅವರನ್ನು ಆಸ್ಪತ್ರೆಗೆ ಕಳಿಸಿ ಅಂತ ಹೇಳಿದ...' ಅನ್ನುತ್ತ ಅವರ ಮುಖ ನೋಡಿದರು...

ಓಂಪ್ರಕಾಶ್ ಮಾತ್ರವಲ್ಲ, ಎಲ್ಲರ ಕಣ್ಣಲ್ಲೂ ನೀರು ಒಸರುತ್ತಿತ್ತು.

### ಪ್ರೇಮಕುಮಾರ್ ಹರಿಯಬ್ಬೆ

ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮದವರು. ವೃತ್ತಿಯಿಂದ ಪತ್ರಕರ್ತ. ಈಗ ಬೆಂಗಳೂರಿನಲ್ಲಿ ವಾಸ. 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳಲ್ಲಿ ಅವರ ಕಥೆಗಳು ಪ್ರಕಟವಾಗಿವೆ. ಅವರ ಕಥಾಸಂಕಲನ 'ಅಕಾಲ' ಇತ್ತೀಚೆಗೆ ಪ್ರಕಟವಾಗಿದೆ.